ಶ್ರೀ ಕೆ. ರಾಮಭಟ್.—ಇವತ್ತು ಶೇಕಡ ೫೦ ರಷ್ಟು ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇವೆ, ಮಾನ್ಯ ಸಚಿವರು ದಯವಿಟ್ಟು ಇದನ್ನು ಪುನರ್ ಪರಿಶೀಲನೆ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಇಲ್ಲಿ ವೇಕೆನ್ಸಿ ಇರತಕ್ಕ ಪೊಸಿಷನ್ ಕೊಡುವಾಗ ಮಾಹಿತಿಯಲ್ಲಿ ಸ್ವಲ್ಪ ತಪ್ಪಾಗಿದೆಯೆಂದು ಕಾಣುತ್ತದೆ. ಅದನ್ನು ನಾನು ಪರಿಶೀಲಿಸುತ್ತೇನೆ.

ಅಧ್ಯಕ್ಷರು.—ಮುಂದಿನ ಪ್ರಶ್ನೆ ಶ್ರೀ ಪಿ. ಪಿ. ಹೆಗೆರೆ.....

ಚಿಕ್ಕೋಡಿ ಜೆನಾವಣ ಕ್ಷೇತ್ರದಲ್ಲಿರುವ ಕೊಳವೆ ಬಾವಿಗಳು

೩೦೦ (೧೯೭) ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ತಾರೀಖು ೧-೩-೧೯೮೩ ರಿಂದ ಇದುವರೆಗೆ ಚಿಕ್ಕೋಡಿ ವಿಧಾನಸಭಾ ಕ್ಷೇತ್ರದಲ್ಲಿ ತೋಡಲಾದ ಕೊಳವೆ ಬಾವಿಗಳ ಸಂಖ್ಯೆ ;

ಆ) ಅವುಗಳಲ್ಲಿ ಯಶಸ್ವಿಯಾದ ಕೊಳವೆ ಬಾವಿಗಳ ಸಂಖ್ಯೆ ;

ಇ) ಅವುಗಳಲ್ಲಿ ಎಷ್ಟಕ್ಕೆ ಕೈ ಪಂಪು ಮತ್ತು ವಿದ್ಯುತ್ ಯಂತ್ರಗಳನ್ನು ಕೂಡ್ರಿಸಿದೆ ;

ಈ) ಇನ್ನೂ ತೋಡಲಾಗಿ ಬೇಕಾಗಿರುವ ಗ್ರಾಮಗಳ ಸಂಖ್ಯೆ ಮತ್ತು ಹೆಸರುಗಳು.

ಶ್ರೀ ಅಬ್ದುಲ್ ನಜೀರ್‌ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

೬೩ ಕೊಳವೆ ಬಾವಿಗಳನ್ನು ತೋಡಲಾಗಿದೆ.

೫೨ ಕೊಳವೆ ಬಾವಿಗಳು ಯಶಸ್ವಿಯಾಗಿದೆ.

೫೨ ಯಶಸ್ವಿಯಾದ ಕೊಳವೆ ಬಾವಿಗಳ ಪೈಕಿ ೪೪ಕ್ಕೆ ಪಂಪು ಅಳವಡಿಸಲಾಗಿದೆ ಮತ್ತು ೨೯ಕ್ಕೆ ವಿದ್ಯುತ್ ಯಂತ್ರಗಳನ್ನು ಕೂಡ್ರಿಸಿದೆ.

ಇನ್ನು ಹತ್ತು ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ತೋಡಬೇಕಾಗಿದೆ.

(ಪಟ್ಟಿ ಲಗತ್ತಿಸಿದೆ)

List of Villages where Borewells are yet to be sunk in Chikkodi Taluk

Sl. No.	Name of Village	No. of B Ws. to be Drilled	Remarks
1.	Kungatolli J. C.	1	As per the instructions of Govenment Letter No. RDC 88 VRW 83 dt. 5-7-83, the drilling of Bore Wells under Scarcity programme is stopped, from 18-7-83. Now the drilling of Borewells under normal programme are being taken up.
2.	Jodakurli M. C.	1	
3.	Keiur H. C.	1	
4.	Jainapur H. C.	1	
5.	Kadapur H. C.	1	
6.	Budihal	1	
7.	Bendwad H. C	1	
8.	Kankanwadi H. C.	1	
9.	Mantur	1	
10.	Bavachi J.C.	1	
	10 Villages	10 B.Ws.	